

ಯಶೋದಾ ಮತ್ತು ಕೃಷ್ಣನ ತೈಲವರ್ಣ ಚಿತ್ರ

# ಅನುಗಾಲವೂ ಪ್ರಕಾಶಿಸುವ ರಾಜಾ ರವಿವರ್ಮ ಕಲಾಕೃತಿ

**ಕಲಾವಿದ ರಾಜಾ ರವಿವರ್ಮ ಕುಂಚದಿಂದ ಸಾಕಾರಗೊಳಿಸಿದ ಕವಿ ಕಲ್ಪನೆಯ ಚೆಲುವಿನ ರೂಪ ಪಡೆದ ಆಕೃತಿಯೊಂದು 167.20 ಕೋಟಿ ರೂಪಾಯಿಗೆ ಹರಾಜಾಗಿ ಹೊಸ ಇತಿಹಾಸವನ್ನು ಬರೆದಿದೆ. ಭಾವನೆಗಳಿಗೆ ಜೀವ ಚೈತನ್ಯದ ಮೂರ್ತರೂಪ ತುಂಬುವ ಕಲೆಗೆ ಬೆಲೆ ಕಟ್ಟಲಾದೀತೆ?**

■ **ರಾಘವೇಂದ್ರ ಕೆ. ತೊಗರ್ಸಿ**

ಭಾರತೀಯ ಪುರಾಣ ಪರಂಪರೆಯ ಕಲಾ ಸೃಷ್ಟಿಯಲ್ಲಿ ಅಗ್ರಗಣ್ಯ ಹೆಸರು ಕಲಾವಿದ ರಾಜಾ ರವಿವರ್ಮ ಅವರದು. ಶಿಲ್ಪಕಲೆಯಲ್ಲಿ ಜಕಣಾಚಾರಿ ಎಂಬ ದಂತಕಥೆಯಂತೆ ತೈಲವರ್ಣಕಲೆಯಲ್ಲಿ ರವಿವರ್ಮ ತಮ್ಮ ಜೀವಿತಾವಧಿಯಲ್ಲಿಯೇ ದಂತಕಥೆಯಾಗಿದ್ದರು. ನಮ್ಮ ಆರಾಧನೆಯ ಬಹುತೇಕ ದೇವಾನುದೇವತೆ, ಪುಣ್ಯಪುರುಷರ ಭಾವ ರೂಪಕ್ಕೆ ಸುಂದರ ಆಕೃತಿಯ ರೂಪ ಸಿದ್ಧಿಸಿದ್ದು ಅವರ ಕೈಚಳಕದಿಂದ. ಗುಣ–ಸ್ವಭಾವ–ಪ್ರಭಾವಕ್ಕೆ ಸೂಕ್ತ ಅಲಂಕಾರ, ವಿನ್ಯಾಸ, ನಾಜೂಕುತನವನ್ನು ನೀಡಿದ್ದು ಅವರ ಕುಂಚ. ಅಂತಹ ಅವಿಸ್ಮರಣೀಯ ಕಲೆಗೆ



ರಾಜಾ ರವಿವರ್ಮ

ಲಿಥೋಗ್ರಾಫಿಕ್ ಮೂಲಕ ಮುದ್ರಿಸಲಾಯಿತು. ಹಾಗಾಗಿ ಹಲವಾರು ದೇವರ ಚಿತ್ರಗಳನ್ನು ಕೋಟ್ಯಂತರ ಭಾರತೀಯರ ಮನೆಗಳನ್ನು ತಲುಪಿಸಲು ಸಾಧ್ಯವಾಯಿತು. ಶಾರದೆ, ಪಾರ್ವತಿ, ಲಕ್ಷ್ಮಿ, ದೇವಾನುದೇವತೆಗಳ ವೈಭವದ ಚಿತ್ರವನ್ನು ನೀಡಿದ ಶ್ರೇಯಸ್ಸು ರಾಜ ರವಿವರ್ಮಗೆ ಸಲ್ಲುತ್ತದೆ. ಅಪ್ರತಿಮ ಕಲೆ ಕಂಡು ಅವರನ್ನು ಜನಸಾಮಾನ್ಯರ ಕಲಾಕಾರ ಎಂದು ಕರೆಯುತ್ತಾರೆ.

ಅದರ ಫಲಶ್ರುತಿ ಎನ್ನುವಂತೆ ‘ರವಿವರ್ಮನ ಕುಂಚದ ಕಲೆ ಬಲೆ ಸಾಕಾರವೊ...’ ಎಂಬ ಜನಪ್ರಿಯ ಸಿನಿಮಾ ಗೀತೆ ರಚನೆಯಿತು ಎಂದೆನಿಸುತ್ತದೆ. ರವಿವರ್ಮ ಕಲಾಶೈಲಿಯನ್ನು ಅಕಡೆಮಿಕ್ ರಿಯಲಿಸಂ (Academic realism) ಎಂದು ಗುರುತಿಸುತ್ತಾರೆ. ಅವರ ಕಲಾಕೌಶಲ್ಯಕ್ಕೆ ಬ್ರಿಟಿಷ್ ಸರ್ಕಾರ ‘ಕೈಸರ್ ಐ ಹಿಂದ್’ ಪುರಸ್ಕಾರವನ್ನು ಚಿನ್ನದ ಪದಕದೊಂದಿಗೆ ನೀಡಿ ಗೌರವಿಸಿತ್ತು. ಶಾಕುಂತಲೆ, ದಮಯಂತಿ ಮತ್ತು ಜಟಾಯು ವಧೆ ಮೊದಲಾದ ರೋಮಾಂಚನವನ್ನು ಉಂಟುಮಾಡುವ ಅವರ ಕಲಾಕೃತಿಗಳು ವಿಶ್ವಮಾನ್ಯವಾಗಿವೆ.

ರವಿವರ್ಮ ಅವರ ರಚನೆಯ ಯಶೋದಾ ಮತ್ತು ಕೃಷ್ಣನ ತೈಲವರ್ಣ ಇತ್ತೀಚೆಗೆ ಮುಂಬೈಯಲ್ಲಿ ನಡೆದ ಹರಾಜಿನಲ್ಲಿ ₹167.20 ಕೋಟಿ ರೂಪಾಯಿಗೆ ಬಿಕರಿಯಾಗಿದೆ. ದೇಶದಲ್ಲಿ ಅತ್ಯಧಿಕ ಬೆಲೆಗೆ ಮಾರಾಟವಾಗಿ ಆ ಕೃತಿ ಇತಿಹಾಸವನ್ನು ನಿರ್ಮಿಸಿದೆ. ಮತ್ತೀಗ ಅವರ ಅಭಿವ್ಯಕ್ತಿಯ ಅನನ್ಯತೆ ಬಗ್ಗೆ ವಿಶ್ವದಲ್ಲಿ ಮಾತನಾಡುವಂತಾಗಿದೆ. ಭಾರತೀಯ ಪುರಾಣ ಕಥೆಗಳು, ರಾಮಾಯಣ ಮತ್ತು ಮಹಾಭಾರತ ಮಹಾಕಾವ್ಯಗಳ ಪ್ರಧಾನ ಘಟನೆಗಳಿಗೆ ದೃಶ್ಯ ರೂಪವನ್ನು ನೀಡುವ ರವಿವರ್ಮ ಸ್ಥಿರಚಿತ್ರಗಳ ಮೂಲಕ ಚಲನೆಯ ಚಿತ್ರದ ಮಾದರಿಯ ಕಥನವನ್ನು ಸ್ಥಿರಸ್ಥಾಯಿಗೊಳಿಸಿದ ಅಪ್ರತಿಮ ಕಲಾವಿದ.

## ಬಣ್ಣಿಸಲು ಅಸದಳ

‘ಯಶೋದಾ ಮತ್ತು ಕೃಷ್ಣ’ 1890ರ ಸುಮಾರಿಗೆ ಈ ಕೃತಿಗೆ ಜೀವಂತಿಕೆಯನ್ನು ತುಂಬಿದ್ದರು. ತಾಯಿ ಯಶೋದೆ ಆಕಳ ಹಾಲನ್ನು